ಈ ಕಾಲದ ಹುಡುಗ್ರನ್ನ ನಂಬೋಕಾಗುತ್ತಾ?'

'ಮತ್ತೆ?'

'ರಟ್ಟೆ ಗಟ್ಟಿ ಇದ್ದಷ್ಟು ದಿನ ಮುಸುರೆ ತಿಕ್ತೀನಿ...' ಅಂದಿದ್ದಳು ಸರೋಜ, ಪಾತ್ರೆ ತಿಕ್ಕಿ ತಿಕ್ಕಿ ಅಂಗೈ ಗೆರೆಗಳು ಮಾಸಿಹೋಗಿದ್ದ ತನ್ನ ಕೈ ನೋಡಿಕೊಳ್ಳುತ್ತಾ.

'ನಂಗೆ ಜೀವಾನೇ ಹೋಗಿತ್ತು'.

'ಯಾರ ಮನೆ ಬಿಟ್ರೂ ನಿಮ್ಮನೆ ಬಿಡಲ್ಲ ನಾನು. ಸಾಯೋವರೆಗೆ ಬಂದು ಕೆಲಸ ಮಾಡ್ಕೊಡ್ತೀನಿ...'

'ಸಾಯೋ ಮಾತು ಆಡ್ಬೇಡ ಮಾರಾಯ್ತೀ...'

'ಸಾಯದೆ ಇರೋಕೆ ನಾವೇನು ಅಮೃತ ಕುಡಿದು ಹುಟ್ಟಿದೀವಾ? ಒಂದಿನ ಎಲ್ರೂ ಸಾಯ್ಲೇಬೇಕು'.

ಮೊನ್ನೆ ಮೊನ್ನೆ ನಡೆದಂತೆ ಈ ಸಂಭಾಷಣೆ ಚಿದಾನಂದನ ಕಿವಿಗಳಲ್ಲಿದೆ. ದೈಹಿಕ ಆಕರ್ಷಣೆ ಕಮ್ಮಿಯಾಗಿ ಪರಸ್ಪರ ದೂರ ಉಳಿದಿದ್ದರೂ ಸರೋಜನ ಮೇಲೆ ಅವಲಂಬನೆ ಬೆಳೆಸಿಕೊಂಡುಬಿಟ್ಟಿದ್ದ ಚಿದಾನಂದ. ಈ ಅವಲಂಬನೆ ಅವಳ ಅನುಪಸ್ಥಿತಿಯನ್ನು ಕಲ್ಪಿಸಿಕೊಳ್ಳಲಾಗದಷ್ಟು ಬೆಸೆದುಕೊಂಡುಬಿಟ್ಟಿತ್ತು. ಹಗಲು, ರಾತ್ರಿಗಳಾಗುವುದು ಎಷ್ಟು ಸತ್ಯವೋ ಸರೋಜ ಆ ಮನೆಗೆ ಕೆಲಸಕ್ಕೆ ಬರುವುದು ಅಷ್ಟೇ ಸತ್ಯ ಎಂಬಷ್ಟು ನಿಯಮಿತವಾಗಿತ್ತು. ಈಗ ಸೊಸೆ ಅವಳನ್ನು ಕೆಲಸದಿಂದ ಬಿಡಿಸುವ ಮಾತಾಡುತ್ತಿದ್ದಾಳೆ. ತನ್ನನ್ನು ಕಣ್ಣ ಗೊಂಬೆಯಂತೆ ಕಾಪಾಡಿಕೊಳ್ಳುತ್ತಿರುವ ಸೊಸೆಯ ಎದುರು ಒಬ್ಬ ಕೆಲಸದ ಹೆಂಗಸಿನ ಪರವಾಗಿ ವಾದ ಮಾಡುವುದು ತನ್ನ ಘನತೆಗೆ ತಕ್ಕುದಲ್ಲ ಎಂದು ಗೊತ್ತಿದೆ ಚಿದಾನಂದನಿಗೆ. ಆದರೆ ಅಷ್ಟು ಸುಲಭವಾಗಿ ಸರೋಜನ ಮುಖದರ್ಶನವನ್ನು ಕಳೆದುಕೊಳ್ಳುವುದಕ್ಕೆ ಅವನು ಸಿದ್ಧನಿಲ್ಲ. ಸಮಾಧಾನವಾಗಿಯೇ ಹೇಳಿದ ಚಿದಾನಂದ, ತನ್ನ ಮಾತಿನಲ್ಲಿ ಯಾವ ಉತ್ಸುಕತೆಯೂ, ಸ್ವಹಿತಾಸಕ್ತಿಯೂ ನುಸುಳದಂತೆ:

'ಅವಳಾಗಿ ಕೆಲಸ ಬಿಟ್ರೆ ಅಡ್ಡಿಲ್ಲ ಕಣೇ. ನಾವಾಗಿ ಬಿಡಿಸೋದು ಬೇಡ. ನಿಂಗೆ ಮೈ ಹಗುರ ಆಗ್ಬೇಕು ಅಂದ್ರೆ ಸಂಜೆ ಹೊತ್ತು ವಾಕಿಂಗ್ ಹೋಗು. ನಿನ್ನ ಮಗನ್ನ ನೋಡಿಕೊಳ್ಳೋ ಜವಾಬ್ದಾರಿ ನಂದು...'

ಹೂಂಗುಟ್ಟಿದ್ದಳು ಶೀಲಾ. ಮಾವನ ಸದ್ಭಾವನೆಯನ್ನು ಅರ್ಥ ಮಾಡಿಕೊಂಡವಳಂತೆ. ಆದರೆ ಯಾವ ಗಳಿಗೆಯಲ್ಲಿ ಶೀಲಾಳ ಬಾಯಿಂದ ಸರೋಜನನ್ನು ಕೆಲಸದಿಂದ ಬಿಡಿಸುವ ಮಾತು ಬಂತೋ, ವಾಸ್ತುದೇವತೆ ಅಸ್ತು ಅಂದಿರಬೇಕು. ಪ್ರೈಮರಿ ಸ್ಕೂಲಿನಲ್ಲಿ ಮೇಷ್ಟ್ರ ಕೆಲಸ ಮಾಡುತ್ತಿದ್ದ ಸರೋಜನ ಮಗನಿಗೆ ಸರ್ಕಾರಿ ಸ್ಕೂಲಿನಲ್ಲಿ ಕೆಲಸ ಸಿಕ್ಕಿತು. ಅನಿವಾರ್ಯವಾಗಿ ಊರು ಬಿಟ್ಟು ಹೊರಡಬೇಕಾಯ್ತು ಸಂಸಾರ. ಸರೋಜ ವಿದಾಯದ ಮಾತು ಹೇಳಿ ಹೋಗಲು ಬಂದಳು.

'ಗೌರ್ಮೆಂಟ್ ಕೆಲಸ ಅಂದ್ರೆ ಪುಗಸಟ್ಟೇನಾ? ಲಕ್ ಹೊಡೀತು ನಿಮಗೆ. ಹೋಗ್ಬನ್ನಿ' ಅಂದಳು ಶೀಲಾ.

ಇಂಥದ್ದೊಂದು ಸಂಭವವನ್ನು ನಿರೀಕ್ಷಿಸಿರದಿದ್ದ ಚಿದಾನಂದನಿಗೆ ಆಕಾಶ ಕಳಚಿ ತಲೆಯ ಮೇಲೆ ಬಿದ್ದ ಅನುಭವ. ತನ್ನ ಕಾಮನೆಗಳಿಗೆ ಸ್ಪಂದಿಸಿ ತನ್ನ ಜೀವನೋತ್ಸಾಹ ಬತ್ತದಂತೆ ನೋಡಿಕೊಂಡಿದ್ದವಳನ್ನು ಇನ್ನು ಈ ಜನ್ಮದಲ್ಲಿ ನೋಡುತ್ತೇನೋ, ಇಲ್ಲವೋ ಎನ್ನುವ ಸಂಕಟ. ಲೋಕಕ್ಕೆ ಈ ವಿಷಯ ಗೊತ್ತಾಗಿದ್ದರೆ ಛೀ.., ಥೂ.. ಅನ್ನುತ್ತಿತ್ತೇನೋ. ಕುಡುಕ ಗಂಡನಿಂದ, ಲಿವರ್ ಕೆಟ್ಟು ಕಾಯಿಲೆ ಬಿದ್ದು ಸತ್ತು ಹೋದವನಿಂದ ಯಾವ ಸುಖ ಉಂಡಳು ಸರೋಜ? ಅವಳಿಗೆ ಸುಖದ ಜೊತೆ ಹಣದ ಅನಿವಾರ್ಯತೆಯಿತ್ತು. ಇವನಿಗೆ ಹಸಿವು ತಣಿಯಬೇಕಿತ್ತು. ಸರಿ, ತಪ್ಪುಗಳನ್ನು ವಿಮರ್ಶಿಸುವಷ್ಟು ತಾಳ್ಮೆ ಕಾಮಕ್ಕೆ ಇರುವುದಿಲ್ಲ. ಅದು ಆ ಕ್ಷಣದ ತುರ್ತು. ಆ ಕುರಿತು ಯಾವ ಜಿಜ್ಞಾಸೆಗೂ ತೊಡಗುವುದಿಲ್ಲ ಚಿದಾನಂದ. ಹಾಗೆ ಗುಡ್ಡ ಗುಣಿಸುತ್ತಾ ಕೂತರೆ ತಲೆ ಕೆಡುತ್ತದೆಯೆಂದು ಅವನಿಗೆ ಗೊತ್ತು.

ಕಣ್ಣೀರ್ಗರೆಯುತ್ತಲೇ ಚಿದಾನಂದನ ಕಾಲಿಗೆ ನಮಸ್ಕರಿಸಿದ್ದಳು ಸರೋಜ. ಒಂದು ಹೊಸ ಸೀರೆಯ ಜೊತೆ ಸಾವಿರ ರೂಪಾಯಿಯ ನೋಟುಗಳನ್ನು ಕವರಿನೊಳಗಿಟ್ಟು ಸರೋಜನಿಗೆ ಕೊಡಲು ಹೇಳಿದ್ದ ಚಿದಾನಂದ. ಅವಳು ನೀಡಿದ ಸುಖಕ್ಕೆ ಸಲ್ಲಿಸುವ ಅಂತಿಮ ಕಾಣಿಕೆ. ದಿನಬಳಕೆಗೆಂದು ತಂದಿದ್ದ ಹೊಸ ಸೀರೆಯ ಜೊತೆ ಮೇಲೆ ಕಾಣುವಂತೆ ಕವರನ್ನು ಇಟ್ಟು ಸರೋಜನಿಗೆ ಕೊಟ್ಟಿದ್ದಳು ಶೀಲಾ. ಕವರಿನೊಳಗಿದ್ದ ಹಣದ ಮೊತ್ತ ಅರ್ಧಕ್ಕರ್ಧ ಕಮ್ಮಿಯಾಗಿದ್ದು ಅವಳಿಗಷ್ಟೇ ಗೊತ್ತಿದ್ದ ಸತ್ಯ. ಅವಳೇನು ಈ ಮನೆಯಲ್ಲಿ ಪುಗಸಟ್ಟೆ ಕೆಲಸ ಮಾಡಿದಳಾ? ಎಲ್ಲರ ಮನೆಯಲ್ಲಿ ಕೊಡುತ್ತಿದ್ದುದಕ್ಕಿಂತ ಹೆಚ್ಚೇ ಅವಳಿಗೆ ಸಂದಾಯವಾಗಿದೆ. ಅದೂ ವರ್ಷಾನುಗಟ್ಟಲೆಯಿಂದ. ಐನೂರಕ್ಕೂ ಬೆಲೆ ಇದ್ದ ಕಾಲ. 'ಕೊಟ್ಟಿದ್ದು ಬೇಕಾದಷ್ಟಾಯ್ತು' ಎಂದು ಸಮರ್ಥಿಸಿಕೊಂಡಿದ್ದಳು ಶೀಲಾ. ಅವತ್ತು ಆ ಮನೆಗೆ ಬಂದಿದ್ದ ಸರೋಜ ತನ್ನ ಅತ್ತೆಯ ಸೀರೆಯನ್ನು ಉಟ್ಟುಕೊಂಡು ಬಂದಿದ್ದಳೆಂದು ಗೊತ್ತಿಲ್ಲ ಶೀಲಾಳಿಗೆ. ಯಾವತ್ತೂ ಚಿದಾನಂದ ಕೊಡಮಾಡಿರುತ್ತಿದ್ದ ಸೀರೆಯನ್ನುಟ್ಟು ಆ ಮನೆಯ ಹೊಸಿಲು ದಾಟಿ ಒಳಗೆ ಬರದವಳು ಅವತ್ತು ಉದ್ದೇಶಪೂರ್ವಕವಾಗಿ ಆ ಸೀರೆಯನ್ನು ಉಟ್ಟುಕೊಂಡು ಬಂದಿದ್ದಾಳೆಂದು ಚಿದಾನಂದನ ಊಹೆ. ಕಾಣೆಯಾಗಿದೆಯೆಂದು ಭಾಮ ತಕರಾರು ತೆಗೆದಿದ್ದ ಅದೇ ಕನಕಾಂಬರ ಬಣ್ಣದ, ಕಪ್ಪು ಬಾರ್ಡರಿನ ಸೀರೆ. ಹಳೆಯ ನೆನಪುಗಳನ್ನು ಪ್ರಿಯನಾದವನಲ್ಲಿ ಉದ್ದೀಪಿಸಲೆಂದೇ? ತಾನೂ ಅದರ ಮೆಲುಕು ಹಾಕಲೆಂದೇ? ಏನೂ ಇರಬಹುದು. ಅವಳು ಹೊರಟು ಹೋದ ಮೇಲೆ ಶೀಲಾ ಹೇಳಿದ್ದಳು,

'ಅವಳು ಉಟ್ಕೊಂಬಂದಿದ್ದು ಮೈಸೂರು ಸಿಲ್ಕ್ ಸೀರೆ ಮಾವ. ದುಬಾರೀದು. ನನ್ಹತ್ರಾನೂ ಅಷ್ಟೊಳ್ಳೇ ಸೀರೆ ಇಲ್ಲ.'

ಪ್ರತಿಕ್ರಿಯಿಸುವಷ್ಟು ಉತ್ಸಾಹ ಚಿದಾನಂದನಿಗಿರಲಿಲ್ಲ. ನಂತರದ ಅವನ ದಿನಗಳು ನೀರಸವಾಗಿದ್ದನ್ನು ಅವನೇ ಗುರುತಿಸಿದ್ದ. ಅವಳನ್ನು ಇಷ್ಟು ಹಚ್ಚಿಕೊಂಡಿದ್ದೇನೇ ತಾನು? ಬೆಳಿಗ್ಗೆ ಅವಳು ಬಂದಳೆಂಬುದನ್ನು ಗೇಟಿನ ಕುಂಯ್ಗುಟ್ಟುವಿಕೆ ಕಿವಿಗೆ ತಲುಪಿಸುತ್ತಿದ್ದಂತೆ ಉತ್ಸಾಹದ ಸೆಳಕೊಂದು ಮನದಲ್ಲಿ ಹಾದು ಹೋಗುತ್ತಿತ್ತೇ? ದಿನದ ಶುಭಾರಂಭವೆನ್ನುವ ಭಾವನೆ? 'ಮಾವ ಯಾಕೋ ಮಂಕಾಗಿದ್ದಾರೆ' ಎಂದು ಜಾಣೆ ಸೊಸೆ ಅರ್ಥ ಮಾಡಿಕೊಂಡಿದ್ದಳು. ಆದರೆ ಈ ಮಂಕುತನಕ್ಕೆ ಕಾರಣ ಸರೋಜನ ನಿರ್ಗಮನ ಎಂದು ಅವಳು ಕನಸಲ್ಲೂ ಭಾವಿಸಲು ಸಾಧ್ಯವಿರಲಿಲ್ಲ. ಶುಗರ್ ಏರಿರಬಹುದಾ? ಬಿ.ಪಿ.?

'ಡಾಕ್ಟ್ರ ಹತ್ರ ಹೋಗ್ಬರೋಣ. ಯಾಕೋ ನೀವು ಮೊದಲಿನ ಹಾಗಿಲ್ಲ...' ಓಲೈಸಿದ್ದಳು ಮಾವನನ್ನು.

'ನಂಗೇನಾಗಿದೆ? ಚೆನ್ನಾಗೇ ಇದೀನಿ'.

'ನಂಗೊತ್ತಾಗುತ್ತೆ ಮಾವ. ನನ್ನ ಕಣ್ಣು ನಂಗೆ ಮೋಸ ಮಾಡಲ್ಲ' ಈ ಪ್ರೀತಿಗೆ ಕರಗಿದ್ದ ಚಿದಾನಂದ. 'ಹುಚ್ಚಿ ನೀನು' ವಾತ್ಸಲ್ಯದಿಂದ ಉದ್ಗರಿಸಿದ್ದ.

'ಮಾವ, ನಂಗೊಂದು ಯೋಚನೆ ಹೊಳೀತಿದೆ...'

'...'

'ಯಾವ ಕೆಲಸ ಕಾರ್ಯ ಇಲ್ದೆ ನೀವು ಜಡ್ಡುಗಟ್ಟಿ ಹೋಗಿದೀರಿ ಅನ್ಸುತ್ತೆ ನಂಗೆ. ರಿಟೈರ್ ಆಗೋವರೆಗೆ ಕ್ಷಣ ಬಿಡುವಿಲ್ಲದೆ ಕೆಲಸ ಮಾಡಿದೋರು. ಅದ್ರಲ್ಲೂ ತಲೆಗೆ ಕೆಲಸ ಕೊಟ್ಟೋರು...'

'ಜೀವಮಾನ ಪೂರ್ತಿ ಬರೀ ದುಡಿಯೋದೇ ಆದ್ರೆ ಸುಖವಾಗಿರೋದು ಯಾವಾಗ ಹೇಳು? ನಂಗೆ ಹಾಗನ್ನಿಸ್ತು...'

'ಸಂಬಳ ಎಣಿಸೋಕೆ ದುಡೀಬೇಡಿ ಮಾವ. ಯಾವ ಕೆಲಸಕ್ಕೂ ಕಮಿಟ್ ಆಗ್ಬಾರ್ದು ಅಂತೇನಿಲ್ವಲ್ಲ?'

'ನಿನ್ನ ಮಗನ್ನ ನೋಡ್ಕೋತಿದೀನಲ್ಲೇ, ಅದೂ ಕೆಲಸಾನೇ ಅಲ್ವಾ?'

'ಹೋಗಿ ಮಾವ, ನಾನು ಏನೋ ಹೇಳೋಕೆ ಬಂದ್ರೆ ನೀವು ಮತ್ತೇನೋ ಹೇಳ್ತೀರಿ...'

'ಹೇಳೇ ಮಾರಾಯ್ತೀ, ಏನು ಹೇಳೋಕೆ ಬಂದೆ?'

'ನಮ್ಮ ಮನೇ ಮೇಲೆ ಒಂದೋ, ಎರಡೋ ಫ್ಲೋರ್ ಕಟ್ಟಿಸಿದ್ರೆ ಹೇಗೆ? ತಿಂಗಳು ತಿಂಗಳೂ ಬಾಡಿಗೆ ಬರ್ತಿರುತ್ತೆ. ನಾವು ಸುಖವಾಗಿ ಸಂಸಾರ ಮಾಡೋಕೆ ಸಾಕೇ ಸಾಕು'.

'ಭಾರೀ ಬುದ್ಧಿವಂತೆ. ಈಗ ಸುಖವಾಗಿಲ್ವಾ ನಾವು?'

'ತಪ್ಪು ತಿಳ್ಕೋಬೇಡಿ ಮಾವ. ನಿಮ್ಮ ಮಗನ ಸಂಬಳ ತಲೆಗೆಳೆದರೆ ಕಾಲಿಗಿಲ್ಲ, ಕಾಲಿಗೆಳೆದರೆ ತಲೆಗಿಲ್ಲ ಅನ್ನೋದು ನಿಮಗೇ ಗೊತ್ತುಂಟು. ಬದುಕು ಮಾಡೋದು ದಿನೇ ದಿನೇ ದುಬಾರಿಯಾಗುತ್ತೇ ಹೊರತು ಕಮ್ಮಿ ಆಗೋಕೆ ಸಾಧ್ಯಾನೇ ಇಲ್ಲ...

'ಯಾವುದಕ್ಕೆ ಪೀಠಿಕೆ ಹಾಕ್ತಿದ್ದೀ? ಮನೆ ಖರ್ಚಿಗೆ ಕೊಡೋ ದುಡ್ಡು ಸಾಕಾಗ್ತಿಲ್ವಾ?'

'ಮಾವ, ತಮಾಷಿ ಮಾಡ್ಬೇಡಿ. ನೀವು ಧಾರಾಳವಾಗಿ ಕೊಡ್ತಿದೀರಿ...'

'...'

'ನಿಮ್ಮ ಮೊಮ್ಮಗ ಇದ್ದ ಹಾಗೇ ಇರ್ತಾನಾ? ನಾಳೆ ಸ್ಕೂಲಿಗೆ ಸೇರ್ಸೋದು ಅಂದ್ರೆ, ಅದರಲ್ಲೂ ಒಳ್ಳೇ ಸ್ಕೂಲಿಗೆ ಸೇರಿಸ್ಬೇಕು ಅಂದ್ರೆ ಕಣ್ಣು ಮುಚ್ಕೊಂಡು ದುಡ್ಡು ಚೆಲ್ಲಬೇಕಾಗುತ್ತೆ...'

'ಅಷ್ಟೆಲ್ಲಾ ಯೋಚನೆ ಮಾಡ್ಬೇಡ ಪುಟ್ಟಿ. ಅದೆಲ್ಲಾ ನಾನು ನೋಡ್ಕೋತೀನಿ...'

ಉಗುಳು ನುಂಗಿಕೊಂಡಳು ಶೀಲಾ. ಏನೋ ಹೇಳಬೇಕೆಂದುಕೊಂಡಿದ್ದನ್ನು ತಡೆದುಕೊಂಡಳು.